
ಗೋಕರ್ಣಕ್ಕೂ ಉಂಟು ಉಪ್ಪಿನ ನಂಟು

## ಒಂಬತ್ತು ರಾಜ್ಯಗಳಲ್ಲಿ ಉಪ್ಪು ತಯಾರಿಕೆ

ದೇಶದ ಒಟ್ಟು ಉಪ್ಪಿನ ಉತ್ಪಾದನೆಯ ಶೇ. 70 ಭಾಗ ಕೈಗಾರಿಕೆಗಳಿಗೆ ಬಳಕೆಯಾದರೆ, ಇನ್ನುಳಿದ ಶೇ. 30 ಭಾಗ ಆಹಾರಕ್ಕೆ ಬಳಕೆಯಾಗುತ್ತದೆ. ನಮ್ಮ ದೇಶದಲ್ಲಿ ಗುಜರಾತ್ ಹೊರತುಪಡಿಸಿದರೆ ಉಪ್ಪು ತಯಾರಿಸುವ ಇನ್ನುಳಿದ ಎಂಟು ರಾಜ್ಯಗಳೆಂದರೆ, ತಮಿಳುನಾಡು, ರಾಜಾಸ್ಥಾನ, ಆಂಧ್ರಪ್ರದೇಶ, ಗೋವಾ, ಕರ್ನಾಟಕ, ಮಹಾರಾಷ್ಟ್ರ, ಒಡಿಶಾ ಮತ್ತು ಪಶ್ಚಿಮ ಬಂಗಾಳ. ಈ ಒಂಬತ್ತು ರಾಜ್ಯಗಳಲ್ಲಿ ಗುಜರಾತ್ ಸುಮಾರು ಶೇ. 75ರಷ್ಟು ಉಪ್ಪನ್ನು ತಯಾರಿಸುತ್ತದೆ ಮತ್ತು ಇಲ್ಲಿ 50 ಸಾವಿರಕ್ಕೂ ಹೆಚ್ಚು ಕೆಲಸಗಾರರು ಉಪ್ಪಿನ ತಯಾರಿಕೆಯಲ್ಲಿ ತೊಡಗಿದ್ದಾರೆ. ತಮಿಳುನಾಡು ಎರಡನೇ ಸ್ಥಾನದಲ್ಲಿದೆ, ಮೂರನೇ ಸ್ಥಾನದಲ್ಲಿ ರಾಜಸ್ಥಾನವಿದೆ.

ರಣ್‌ನಲ್ಲಿ ದಾಂತಾರಾ ಬಳಸಿದಂತೆ ಇಲ್ಲಿ ಹಲ್ಲಿ ಬಳಸಿ ರೇಕಿಂಗ್ ಮಾಡುತ್ತಾರೆ. ಒಮ್ಮೆ ಉಪ್ಪು ಹರಳುಗಟ್ಟಲು ಆರಂಭಿಸಿದ ನಂತರ ಪ್ರತಿದಿನ ಉಪ್ಪನ್ನು ಹೊರತೆಗೆಯುತ್ತಾರೆ.

"ಆಗೇರಿಗಳನ್ನು ಸೊಸೈಟಿಯಿಂದಲೇ ನೇಮಕ ಮಾಡಿಕೊಳ್ತೇವೆ. ಹೆಚ್ಚಾಗಿ ಡಿಸೆಂಬರ್ ತಿಂಗಳಿನಿಂದ ಮೇವರೆಗೆ ಕಾಂಟ್ರಾಕ್ಟ್ ಇರುತ್ತದೆ. ಸೀಸನಲ್ ಕಾರ್ಮಿಕರಾದ ಇವರಿಗೆ ಸೊಸೈಟಿಯಿಂದ ಫ್ಯಾಕ್ಟರಿ ನಿಯಮಗಳಿಗೆ ಅನುಗುಣವಾಗಿ ಪ್ರಾವಿಡೆಂಟ್ ಫಂಡ್ ಮತ್ತು ಗ್ರಾಚ್ಯುಟಿ ಸೌಲಭ್ಯಗಳು ಇವೆ. ಸಾಮಾನ್ಯವಾಗಿ ಮಳೆಗಾಲದಲ್ಲಿ, ಹಬ್ಬಗಳ ಸಮಯದಲ್ಲಿ ಸೊಸೈಟಿಯಿಂದ ಅಗತ್ಯವಿದ್ದವರಿಗೆ ಮುಂಗಡ ಹಣವನ್ನೂ ಕೊಡುತ್ತೇವೆ. ಅವರಿಗೆ ಉಪ್ಪಿನ ಗದ್ದೆಯಲ್ಲಿ ದಿನಕ್ಕೆ ಮೂರ್ನಾಲ್ಕು ಗಂಟೆ ಮಾತ್ರ ಕೆಲಸವಿರುತ್ತದೆ. ಒಬ್ಬರಿಗೆ 300 ರೂ. ವೇತನ, ಜೊತೆಗೆ ಉಪ್ಪನ್ನು ಲೋಡ್ ಮಾಡುವ ಕೆಲಸ ಮಾಡಿದರೆ ಅದಕ್ಕೆ ಪ್ರತ್ಯೇಕ ವೇತನ ಕೊಡುತ್ತೇವೆ" ಎಂದು ನಾಗರಬೈಲು ಸಹಕಾರಿ ಸಂಘದ ಸದಸ್ಯರಾದ ದುರ್ಗೇಶ್ ಕಾಗಲ್ ವಿವರಿಸುತ್ತಾರೆ.

ಆಗೇರಿಗಳ ಮಕ್ಕಳು ಶಿಕ್ಷಣ ಪಡೆದು, ಬೇರೆಡೆ ಕೆಲಸ ಮಾಡಲು ಹೋಗುತ್ತಿದ್ದಾರೆ. ಉಪ್ಪಿನ ಕೆಲಸಕ್ಕೆ ಬರುವ ಆಗೇರಿ ಕೆಲಸಗಾರರ ಸಂಖ್ಯೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಹವಾಮಾನ ಏರಿಳಿತದಿಂದ ಆಗುತ್ತಿರುವ ಸಮಸ್ಯೆಗಳು ಇವರನ್ನೂ ತಟ್ಟುತ್ತಿವೆ. ಅಕಾಲದಲ್ಲಿ ಸುರಿಯುವ ಮಳೆಯಿಂದಾಗಿ ಉಪ್ಪಿನ ಗುಣಮಟ್ಟ ಹಾಗೂ ಪ್ರಮಾಣ ಎರಡಕ್ಕೂ ಹೊಡೆತ ಬೀಳುತ್ತಿದೆ. ಈ ವರ್ಷ ಏಪ್ರಿಲ್‌ನಲ್ಲಿ ಅಕಾಲಿಕ ಮಳೆ ಸುರಿದಿದ್ದರಿಂದ ಉಪ್ಪು ಕಡಿಮೆ ಉತ್ಪಾದನೆಯಾಗಿದೆ. ಹವಾಮಾನ ಸರಿಯಾಗಿದ್ದರೆ 10,000 ಮೆಟ್ರಿಕ್ ಟನ್ ಉತ್ಪಾದನೆಯಾಗುತ್ತದೆ. ಆದರೆ ಈ ಸಲ ಅದರ ಅರ್ಧದಷ್ಟು, ಅಂದರೆ ಸುಮಾರು 5000 ಮೆಟ್ರಿಕ್ ಟನ್ ಮಾತ್ರ ಉತ್ಪಾದನೆಯಾಗಿದೆ. ಸೊಸೈಟಿಯ ಆಡಳಿತ ಮಂಡಳಿಯು ಪ್ರತಿವರ್ಷದ ಮಾರುಕಟ್ಟೆ ಸ್ಥಿತಿಗತಿಯನ್ನು ಪರಿಶೀಲಿಸಿ, ದರವನ್ನು ನಿಗದಿ ಮಾಡುತ್ತದೆ. ಇಲ್ಲಿ ಉಪ್ಪು ತಯಾರಾದ ನಂತರ ಸ್ವಲ್ಪ ಭಾಗಕ್ಕೆ ಅಯೋಡಿನ್ ಸೇರಿಸಿ, ಅಯೋಡೈಸ್ಡ್ ಉಪ್ಪನ್ನು ಮಾಡುತ್ತಾರೆ.

### 'ರೈತರೆಂದು ಪರಿಗಣಿಸಿ'

ಉಪ್ಪಿಲ್ಲದ ಊಟದ ತಟ್ಟೆಯನ್ನು ಕಲ್ಪಿಸಿಕೊಳ್ಳುವುದೂ ಸಾಧ್ಯವಿಲ್ಲ. ಹತ್ತುಹಲವು ಕೈಗಾರಿಕೆಗಳಿಗೂ ಉಪ್ಪು ಬೇಕು. ಆದರೆ ಉಪ್ಪನ್ನು ತಯಾರಿಸುವ ಕಾಯಕದಲ್ಲಿ ತೊಡಗಿರುವ ಕೆಲಸಗಾರರ ಬದುಕನ್ನು ಹಸನುಗೊಳಿಸುವ ಜವಾಬ್ದಾರಿ ಯಾರಿಗೂ ಬೇಡ. ಉಪ್ಪಿನ ಕೆಲಸಗಾರರ ಕುರಿತು ಆಯಾ ಪ್ರದೇಶದ ಸಂಸದರು ಹಾಗೂ ಶಾಸಕರು ಅವರಿಗೆ ನ್ಯಾಯೋಚಿತವಾಗಿ ದೊರೆಯಬೇಕಿರುವ ಯೋಜನೆಗಳನ್ನು ಜಾರಿಗೊಳಿಸುವಲ್ಲಿ ಬಹಳಷ್ಟು ವೇಳೆ ನಿರಾಸಕ್ತಿ ವಹಿಸುತ್ತಾರೆ ಹಾಗೂ ನುಣುಚಿಕೊಳ್ಳುತ್ತಾರೆ. 'ಕೊನೇಪಕ್ಷ ನಮ್ಮ ಲೈಸೆನ್ಸ್ ಆದ್ರೂ ನವೀಕರಿಸಿ ಎಂದರೆ, ಅದಕ್ಕೂ ಹತ್ತಾರು ಸಬೂಬು ಹೇಳುತ್ತಾರೆ. ನಾವು ಓದುಬರಹ ಬಲ್ಲವರಲ್ಲ. ಊರಿನಲ್ಲಿ ಜಮೀನು ಇಲ್ಲ. ಕೊನೆಯ ಪಕ್ಷ ರಣ್‌ದಲ್ಲಿ ಉಪ್ಪು ಮಾಡುವ ಭೂಮಿಯಾದ್ರೂ ನಮ್ಮ ಹೆಸರಲ್ಲಿದೆ. ಇದು ಬಿಟ್ಟರೆ ನಮ್ಮದು ಅಂತ ಏನಿದೆ?" ಎಂದು ಅಮರ್‌ಸಿ ಕಲಾಭಾಯಿ ಬೇಸರದಿಂದ ನುಡಿಯುತ್ತಾರೆ.

"ಕೋವಿಡ್‌ಗಿಂತ ಮೊದಲು ಒಮ್ಮೆ ಗಮ್‌ಬೂಟ್‌ಗಳು, ಗಾಗಲ್‌ಗಳು, ಸೈಕಲ್ ಇತ್ಯಾದಿ ಕೊಟ್ಟಿದ್ದರು. ಆಮೇಲೆ ಕೊಟ್ಟಿಲ್ಲ. ಉಪ್ಪಿನ ಋತು ಶುರುವಾದ ನಂತರ, ಅಲ್ಲೊಂದು ಇಲ್ಲೊಂದು ಕಡೆ ಆರೋಗ್ಯಶಿಬಿರ ಆಯೋಜಿಸ್ತಾರೆ. ಆದರೆ ಹೆಚ್ಚಿನ ವೈದ್ಯಕೀಯ ನೆರವು ದೊರೆಯುವುದಿಲ್ಲ" ಎಂದು ರಾಮು ಭಾಯಿ ವಾಸ್ತವ ಬಿಚ್ಚಿಡುತ್ತಾರೆ.

"ಸೆಂಟ್ರಲ್ ಸಾಲ್ಟ್ ಕಮಿಶನರೇಟ್‌ನಿಂದ ನಮ್ಮ ಆಗೇರಿಗಳ ಮಕ್ಕಳಿಗೆ ಪ್ರತಿವರ್ಷ ಸ್ಕಾಲರ್‌ಶಿಪ್ ದೊರೆಯುತ್ತಿದೆ. ಆರೋಗ್ಯ ತಪಾಸಣೆಗೆ ಸ್ವಲ್ಪ ಸಹಾಯವಾಗುತ್ತಿದೆ. ಈ ಎರಡೂ ಬಿಟ್ಟರೆ ಬೇರೇನಿಲ್ಲ" ಎನ್ನುತ್ತಾರೆ ದುರ್ಗೇಶ್.

"ಬೇರೆ ಬೆಳೆಗಳನ್ನು ಬೆಳೆದಂತೆಯೇ ಉಪ್ಪನ್ನೂ ಕೂಡ ಗದ್ದೆಗಳಲ್ಲಿ ಮಾಡುತ್ತಾರೆ. ಹೀಗಾಗಿ ಉಪ್ಪು ಮಾಡುವವರನ್ನು ರೈತರು ಎಂದು ಪರಿಗಣಿಸಿ. ಉಪ್ಪನ್ನು ಒಂದು ಕೃಷಿ ಉತ್ಪನ್ನ, ಕನಿಷ್ಠ ಬೆಂಬಲ ಬೆಲೆ ಪಟ್ಟಿಯಲ್ಲಿನ ಬೆಳೆ ಎಂದು ಘೋಷಿಸಿ. ಉಪ್ಪು ಮಾಡುವವರಿಗೆ ಕಿಸಾನ್ ಸಮ್ಮಾನ್ ನಿಧಿ, ಆರೋಗ್ಯ, ಶಿಕ್ಷಣ, ಇನ್ನಿತರ ಮೂಲಸೌಲಭ್ಯಗಳನ್ನು ಒದಗಿಸಿ" ಎನ್ನುವುದು ದುರ್ಗಾಬೆನ್, ರಾಮು ಭಾಯಿ, ಅಮರ್‌ಸಿಕಲಾ ಭಾಯಿಯಂತಹ ಸಾವಿರಾರು 'ಮೀಟಾ ಕಾಮದಾರ್'ಗಳ ಬಹುದಿನಗಳ ಬೇಡಿಕೆ.

"ಯಂತ್ರಗಳನ್ನು ಬಳಸಿ, ಸಮುದ್ರದ ನೀರಿನಿಂದ ದೊಡ್ಡ ಪ್ರಮಾಣದಲ್ಲಿ ಉಪ್ಪು ತಯಾರಿಸುವ ಕಂಪನಿಗಳಿಗೆ ಸರ್ಕಾರದಿಂದ ಸೌಲಭ್ಯಗಳನ್ನು ಕೊಡ್ತಾರೆ. ಆದರೆ ಮೂರು ನಾಲ್ಕು ಎಕರೆ ಭೂಮಿಯಲ್ಲಿ ಉಪ್ಪು ತಯಾರಿಸುವವರನ್ನು ಮನುಷ್ಯರಂತೆಯೂ ನಡೆಸಿಕೊಳ್ಳುವುದಿಲ್ಲ" ಎಂದು ರಾಮು ಭಾಯಿ ನೋವಿನಿಂದ ಹೇಳುತ್ತಾರೆ.

ಊಟಕ್ಕೆ ಉಪ್ಪು ರುಚಿ ನೀಡುತ್ತದೆ. ಉಪ್ಪು ತಯಾರಿಸುವವರ ಬದುಕಿನ ರುಚಿಯೂ ಹೆಚ್ಚಬೇಕಲ್ಲವೆ? ಆ ನಿಟ್ಟಿನಲ್ಲಿ ಸರ್ಕಾರ ಮತ್ತು ಸಮುದಾಯ ಯೋಚಿಸಬೇಕಾಗಿದೆ.

ಪ್ರತಿಕ್ರಿಯಿಸಿ: feedback@sudha.co.in